


**20ನೇ ಶತಮಾನದಲ್ಲಿ ಇಂಗ್ಲೆಂಡ್ ಹಾಗೂ ಅಮೆರಿಕದಲ್ಲಿ ತಯಾರಾದ ಮನುಷ್ಯರನ್ನು ತೂಗುವ ತಕ್ಕಡಿಗಳು**



ಕಾಡಿತು. ಆಗ ವೃತ್ತಿಗೆ ಸಂಬಂಧಿಸಿದ ತೂಕ ಮತ್ತು ಅಳತೆಯ ಸಾಧನಗಳನ್ನೇ ಸಂಗ್ರಹಿಸಲು ಮುಂದಡಿ ಇಟ್ಟರು. ಮಣಿಪಾಲದ 'ಹೆರಿಟೇಜ್ ವಿಲೇಜ್'ನ ಸಂಸ್ಥಾಪಕ ವಿಜಯನಾಥ್ ಶೆಣೈ ಅವರಿಂದ ಪ್ರಭಾವಿತರಾದ ಅವರು ಭಿನ್ನ ಹವ್ಯಾಸ, ಸಂಗ್ರಹದ ದಾರಿಯನ್ನು ಆರಿಸಿಕೊಂಡರು.

'ಈ ಆಲೋಚನೆಯನ್ನು ಹಲವು ಸ್ನೇಹಿತರೊಂದಿಗೆ ಹಂಚಿಕೊಂಡೆ. ಅವರೂ ಸಮ್ಮತಿಸಿ ಪ್ರೋತ್ಸಾಹಿಸಿದರು. ಇದೆಲ್ಲ ನಡೆದದ್ದು 2006ರ ಆಸುಪಾಸಿನಲ್ಲಿ. ಅಂದು ಹತ್ತಿದ ತೂಕ–ಅಳತೆ ಸಾಧನಗಳ ಸಂಗ್ರಹದ ಹುಚ್ಚು ಇಂದಿಗೂ ಬಿಟ್ಟಿಲ್ಲ' ಎಂದು ನಗೆ ಚೆಲ್ಲುತ್ತಾರೆ ಬಸವರಾಜ್.

## ಸುಲಭದ ನಂಟಾಗಿರಲಿಲ್ಲ...

ಬಸವರಾಜ್ ತಮ್ಮ ಹವ್ಯಾಸದ ನಂಟನ್ನು ಮುಂದುವರಿಸಿಕೊಂಡು ಹೋಗುವ ಹಾದಿ ಸುಲಭದ್ದಾಗಿರಲಿಲ್ಲ. ತೂಕ ಮತ್ತು ಅಳತೆಯ ಮಾಹಿತಿ ಸಂಗ್ರಹಣೆ ಅವರಿಗೆ ಸವಾಲಿನ ಕೆಲಸವಾಗಿತ್ತು.

'14ನೇ ಶತಮಾನದ ತೂಕದ ಕಲ್ಲುಗಳು ದೊರೆತರೂ ಅವುಗಳನ್ನು ದೃಢೀಕರಿಸುವ, ಒರೆಗೆ ಹಚ್ಚಿ ಪರಿಶೀಲಿಸುವಂತಹ ಮಾಹಿತಿ ಎಲ್ಲೂ ಸಿಗುತ್ತಿರಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ಇತಿಹಾಸದಲ್ಲಿ ಪುಸ್ತಕಗಳಲ್ಲಿ ದಾಖಲಾದ ಮಾಹಿತಿ ಅತ್ಯಲ್ಪ. ಇಂಟರ್ನೆಟ್ ತಡಕಾಡಿದರೂ ಸಿಗುತ್ತಿದ್ದ ಮಾಹಿತಿ ಕಡಿಮೆ. ಹಾಗಾಗಿ ಎಲ್ಲವನ್ನೂ ಮೂಲದಿಂದಲೇ ಸಂಗ್ರಹಿಸುವ ಕೆಲಸ ಮಾಡಬೇಕಾಯಿತು. ಅದಕ್ಕಾಗಿ ದೇಶದ ಮೂಲೆ ಮೂಲೆ ಸುತ್ತಿದ್ದೇನೆ. ಹಲವು ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡಿದ್ದೇನೆ. ಶಾಸನಗಳ ಅಧ್ಯಯನ ಮಾಡಿದ್ದೇನೆ. ಹಲವು ಇತಿಹಾಸಕಾರರೊಂದಿಗೆ ಚರ್ಚಿಸಿದ್ದೇನೆ. ಇಂಗ್ಲಿಷ್ ಗೆಜೆಟಿಯರ್‌ಗಳು, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಇತಿಹಾಸದ ಪುಸ್ತಕಗಳನ್ನು ಅಧ್ಯಯನ ಮಾಡಿರುವೆ' ಎಂದು ನೆನಪಿಸಿಕೊಳ್ಳುವರು.

ತೂಕ ಮತ್ತು ಅಳತೆಯ ಸಾಧನಗಳನ್ನು ಕಲೆಹಾಕಲು, ಮಾಹಿತಿ ಸಂಗ್ರಹಿಸಲು ಕರ್ನಾಟಕದ ಹಳ್ಳಿಹಳ್ಳಿಗಳನ್ನು ಸುತ್ತಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಹಾಗೂ ಈಶಾನ್ಯ ಭಾರತದ ರಾಜ್ಯಗಳನ್ನು ಹೊರತುಪಡಿಸಿ ದೇಶದ ಎಲ್ಲ ರಾಜ್ಯಗಳನ್ನು ಅವರು ಎಡತಾಕಿದ್ದಾರೆ. ಅಲ್ಲಿನ ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡಿ ಮಾಹಿತಿ ಹೆಕ್ಕಿದ್ದಾರೆ. ಸ್ಥಳೀಯವಾಗಿ ಪ್ರಕಟಗೊಂಡ ಇತಿಹಾಸದ ಪುಸ್ತಕಗಳ ಅಧ್ಯಯನ ಮಾಡಿದ್ದಾರೆ. ಆಯಾ ಪ್ರದೇಶಗಳಲ್ಲಿ ದೊರೆತ ಸಾಧನಗಳ ಮಾಹಿತಿಯನ್ನು ಅಲ್ಲೇ ಕಲೆಹಾಕಿ ದಾಖಲಿಸಿಕೊಂಡಿದ್ದಾರೆ. ಕೆಲ ಸಾಧನಗಳನ್ನು ಕೇಳಿ ಪಡೆದಿದ್ದಾರೆ. ಇನ್ನು ಕೆಲವರು ಇವರ ಹವ್ಯಾಸ ಮೆಚ್ಚಿ ಅವರೇ ಕೊಟ್ಟಿದ್ದಾರೆ. ಕೆಲವನ್ನು ಗುಜರಿ ಅಂಗಡಿಯಿಂದ, ಹಳೆ ವಸ್ತು ಮಾರಾಟಗಾರರಿಂದ ಖರೀದಿಸಿದ್ದಾರೆ. ಹಾಳಾಗಿರುವ ಕೆಲವು ಸಾಧನಗಳನ್ನು ರಿಪೇರಿ ಮಾಡಿಸಿ, ಕೆಲವನ್ನು ತಾವೇ ರಿಪೇರಿ ಮಾಡಿ ಸಂಗ್ರಹಾಲಯದಲ್ಲಿ ಸುಸ್ಥಿತಿಯಲ್ಲಿಟ್ಟಿದ್ದಾರೆ.

'ಬಹುತೇಕ ಸಾಧನಗಳನ್ನು ಮುಂಬೈನ ಚೋರ್ ಬಜಾರ್, ಚೆನ್ನೈನ ಮೋರ್ ಬಜಾರ್, ಬೆಂಗಳೂರಿನ ಸಂಡೆ ಮಾರ್ಕೆಟ್, ದೆಹಲಿಯ ಹಳೆ ಸಾಮಗ್ರಿ ಅಂಗಡಿಗಳಿಂದ ಸಂಗ್ರಹಿಸಿದ್ದೇನೆ. ಮೊದಲೆಲ್ಲ ನನ್ನ ಹವ್ಯಾಸವನ್ನು ಕೇಳಿ ಖುಷಿಯಿಂದ ಕೊಡುತ್ತಿದ್ದರು. ಅವರಲ್ಲಿ ಪ್ರಯೋಜನಕ್ಕೆ ಬಾರದ ಎಷ್ಟೋ ಸಾಧನಗಳು ನನ್ನ ಸಂಗ್ರಹಾಲಯದಲ್ಲಿ ಮೌಲ್ಯ ಪಡೆದುಕೊಂಡವು. ನಿರ್ಜೀವವಾಗಿ ಬಿದ್ದಿದ್ದ ಗಡಿಯಾರಗಳು, ತಕ್ಕಡಿಗಳಿಗೆ ಮರುಜೀವ ಕೊಟ್ಟ ಖುಷಿ ಸಿಕ್ಕಿತು' ಎನ್ನುವ ಹೆಮ್ಮೆಯ ಮಾತು ಅವರದ್ದು.



**250 ವರ್ಷಗಳ ಹಿಂದಿನ ಕಬ್ಬಿಣದ ಸರಪಳಿ ತೋರುತ್ತಿರುವ ಬಸವರಾಜ್ ಯಳಮಲ್ಲಿ**

ಅವರ ಕ್ಷೇತ್ರ ಕಾರ್ಯದ ಅನುಭವ ಪುಸ್ತಕ ರೂಪವನ್ನು ಪಡೆದಿದೆ. 'ತೂಕ ಮತ್ತು ಅಳತೆ ಸಾಧನಗಳ ಇತಿಹಾಸ ಮತ್ತು ಪರಂಪರೆ' ಪುಸ್ತಕವನ್ನು 2010ರಲ್ಲಿ ಹೊರತಂದಿದ್ದಾರೆ. ಚಿತ್ರ ಸಹಿತ ಮಾಹಿತಿ ಒಳಗೊಂಡಿರುವ ಈ ಪುಸ್ತಕ ಸಂಶೋಧನಾ ವಿದ್ಯಾರ್ಥಿಗಳಿಗೆ ಆಕರ ಗ್ರಂಥವಾಗಿದೆ. 15 ವರ್ಷಗಳ ಹಿಂದೆ ಪ್ರಕಟಗೊಂಡ ಪುಸ್ತಕದ ಮಾಹಿತಿಗಿಂತ ಈಗ ಇನ್ನೂ ಹೆಚ್ಚು ಮಾಹಿತಿಯನ್ನು ಕಲೆಹಾಕಿರುವ ಬಸವರಾಜ್, ಪ್ರತಿ ತೂಕದ ಕಲ್ಲು, ಅಳತೆ ಮಾಪನಗಳ ಕಾಲಮಾನ, ಪ್ರದೇಶ ವ್ಯಾಪ್ತಿಯ ಖಚಿತತೆಯನ್ನು ನೀಡುತ್ತಾರೆ.

ಇವರ ಸಂಗ್ರಹಾಲಯವನ್ನು ಡಿಜಿಟಲೀಕರಣಗೊಳಿಸಲು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಆಸಕ್ತಿ ತೋರಿದ್ದು, ಆ ಕೆಲಸವೂ ಪ್ರಗತಿಯಲ್ಲಿದೆ. ದೆಹಲಿಯ ಲೀಗಲ್ ಮೆಟ್ರೊಲಜಿ ವಿಭಾಗವು (Department of Legal Metrology, Delhi) ತುಲಾ ಭವನ ಸಂಗ್ರಹಾಲಯದಲ್ಲಿರುವ ತೂಕಳತೆ ಸಾಧನಗಳ ಚಿತ್ರ ಸಹಿತ ಮಾಹಿತಿ ಸಲ್ಲಿಕೆಗೆ ಸೂಚಿಸಿದ್ದು, ಅದು ಸಹ ಪುಸ್ತಕದ ರೂಪು ಪಡೆದಿದೆ.

ಪ್ರತಿಕ್ರಿಯಿಸಿ: feedback@sudha.co.in